**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5018/2023 ಫ್ರಾಸಾ-03
ಚಾಸಾ-04

ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮೇಘನಾ |
| **ತಂದೆಯ ಹೆಸರು** | ರಂಗನಾಥ |
| **ವಯಸ್ಸು** | 20 |
| **ಉದ್ಯೋಗ** | ಬಿ.ಕಾಂ. ವಿದ್ಯಾರ್ಥಿ |
| **ವಾಸಸ್ಥಳ** | ಬಂದ್ರೆಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-1 ಮತ್ತು 2 ನನ್ನ ತಾಯಿ ಮತ್ತು ತಂದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿರುವುದಿಲ್ಲ. ಆರೊಪಿತರು ನಮ್ಮ ಊರಿನವರು , ಅವರ ಪರಿಚಯ ಇರುತ್ತದೆ. ಆದರೆ ಅವರು ಏನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಮತ್ತು ನನ್ನ ಅಜ್ಜಿಗೆ ಗಾಯಗಳು ಆಗಿರುತ್ತವೆ ಆದರೆ ಹೇಗೆ ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ತಲೆಗೆ , ಹಣೆಗೆ ಗಾಯವಾಗಿರುತ್ತದೆ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 01.03.2023 ರಂದು ರಾತ್ರಿ 8-00 ಗಂಟೆಗೆ ನಾನು , ಚಾಸಾ-1, 2, 3, 5 ರಿಂದ 7 ಮನೆ ಹತ್ತಿರ ಇರುವಾಗ ಚಾಸಾ-9 ರವರು ಮನೆ ಬಳಿ ಬಂದು ತೇರಿನ ಬೀದಿಯಲ್ಲಿರುವ ಛತ್ರದ ಕೀಳಿದ್ದು ನನ್ನ ತಂದೆ ಕೀ ಕೊಟ್ಟಿದ್ದು ಅವನೊಂದಿಗೆ ಶ್ರೀರಂಗನಾಥಸ್ವಾಮಿ ದೇವಸ್ಥಾನದವರೆಗೂ ಹೋಗಿ ನನ್ನ ತಂದೆ ವಾಪಸ್ಸು ಬರುವಾಗ ನ್ಯಾಯಾಲಯದ ಮುಂದೆ ಇರುವ 2 ಆರೋಪಿ ಕುಡಿದು ಆರೋಪಿ 3 ರವರೊಂದಿಗೆ ಗಲಾಟೆ ಮಾಡಿಕೊಳ್ಳುತಿದ್ದ. ಆಗ ನನ್ನ ತಂದೆಯನ್ನು ನೋಡಿದ ಕೂಡಲೇ ನನ್ನ ತಂದೆಗೆ ಮೂರು ರೋಡ್ ಮರಳಿನ ದುಡ್ಡು ಕೊಡಬೇಕು ನನ್ನ ತಂದೆ ಆಯಿತು ಬೆಳಿಗ್ಗೆ ಮಾತನಾಡೋಣ ಎಂದು ಹೇಳಿದರೂ ಕೂಡ ಆರೋಪಿ ಬಸವರಾಜು ನನ್ನ ತಂದೆಯ ಕೊರಳಿ ಪಟ್ಟಿ ಹಿಡಿದು ಎಳೆದಾಡಿದ ಅಷ್ಟರಲ್ಲಿ ಆರೋಪಿ-1 , 3 ಮತ್ತು 4 ರವರು ಬಂದು ಹಳೇ ದ್ವೇಷದಿಂದ ಏಕಾ ಏಕಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ದೇವಸ್ಥಾನದ ಬಳಿ ಬಿದಿದ್ದ ಇಟ್ಟಿಗೆ ಪೀಸು ಮತ್ತು ಕಲ್ಲುಗಳಿಂದ ನನ್ನ ತಂದೆಯ ಎಡ ಕೆನ್ನೆಗೆ ಎಡ ಕಣ್ಣಿನ ಪಕ್ಕ ಹೊಡೆದರು ಅಷ್ಟರಲ್ಲಿ ನಾನು , ಚಾಸಾ-1, ಚಾಸಾ-3, ಚಾಸಾ-5 ರಿಂದ 7 ಹೋಗಿ ಜಗಳ ಬಿಡಿಸಿದೇವು , ನನ್ನ ತಂದೆಯನ್ನು ಮನೆ ಕಡೆಗೆ ಕರೆದುಕೊಂಡು ಹೋಗುವಾಗ ಆರೋಪಿತರೆಲ್ಲರೂ ಚಾಸಾ-7 ನನ್ನ ಅಜ್ಜಿಯನ್ನು ತಳ್ಳಿದ್ದು ಅವರು ಕೆಳಗೆ ಬಿದ್ದರು ಇದರಿಂದ ಅವರ ತಲೆಗೆ, ರುಂಡಿಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಚಿಕಿತ್ಸೆ ಪಡೆದುಕೊಂಡು ಪೊಲೀಸ್ ದೂರು ಕೊಡಲು ಎಂದು ರಾತ್ರಿ 8-40 ಗಂಟೆಗೆ ಭಾಗ್ಯಮ್ಮ ರವರ ಅಂಗಡಿಯ ಮುಂದಿನ ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿ-1 ರಿಂದ 4 ರವರು ನನ್ನ ತಂದೆಯನ್ನು ಅಡ್ಡಗಟ್ಟಿ ನೀನು ಪೊಲೀಸ್ ಠಾಣೆಗೆ ನನ್ನ ಮೇಲೆ ದೂರು ಕೊಡಲು ಹೋಗುತ್ತೀಯಾ ಎಂದು ಮತ್ತೆ ತಡೆದು ಜಗಳ ತೆಗೆದು ನಿನಗೆ ಒಂದು ಗತಿ ಕಾಣಿಸುತ್ತೇವೆ ನೀನು ಹೇಗೆ ಹೋಗುತ್ತೀಯಾ ಈ ದಿವಸ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಆರೋಪಿ ರಾಮು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಕೊಲೆ ಮಾಡುವ ಉದ್ದೇಶ ದಿಂದ ನನ್ನ ತಂದೆಯ ತಲೆ ಹಿಂಭಾಗಕ್ಕೆ ಜೊರಾಗಿ ಹೊಡೆದನು , ಆರೋಪಿ ಬಸವರಾಜು ನನ್ನ ತಂದೆಯನ್ನು ಕೊಲೆ ಮಾಡುವ ಉದ್ಧೇಶದಿಂದ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ತಲೆಯ ಎಡಭಾಗಕ್ಕೆ ಹೊಡೆದನು , ಆರೋಪಿ ಶನಿವಾರಪ್ಪ ನನ್ನ ತಂದೆಯನ್ನು

**ಚಾಸಾ-04**

ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಬಲಗೈಗೆ ಹೊಡೆದನು ಅಷ್ಟರಲ್ಲಿ ನಾನು , ಚಾಸಾ-1, ಚಾಸಾ-3, ಚಾಸಾ-5, 6 ಮತ್ತು 8 ರವರು ಬಂದು ಗಲಾಟೆ ಬಿಡಿಸಿದರು, ನಾಲ್ಕು ಜನ ದೊಣ್ಣೆಗಳನ್ನು ಅಲ್ಲೆ ಬಿಸಾಕಿ ನನ್ನ ತಂದೆಯನ್ನು ಕೊಲೆ ಮಾಡದೇ ಬಿಡುವುದಿಲ್ಲ ನಿಮ್ಮ ಮನೆಯವರಿಗೆಲ್ಲರಿಗೂ ಒಂದು ಗತಿ ಕಾಣಿಸುತ್ತೇನೆ ಎಂದು ಬೆದರಿಕೆ ಹಾಕಿ ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ನನ್ನ ತಂದೆಯನ್ನು ಮಧುಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಂತರ ಅಲ್ಲಿಂದ ತುಮಕೂರು ಮತ್ತು ಬೆಂಗಳೂರಿನ, ನಿಮಾನ್ಸ್, ವಿಕ್ಟೋರಿಯಾ ಮತ್ತು ಬಾಪಿಸ್ಟ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ನ್ನು ನಿಪಿ-5 ಮತ್ತು ಮರು ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀಸವಾಲು ,ಶ್ರೀ. ಎಸ್.ಆರ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**